**<u>ದಿನಾಂಕಃ 03.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.</u>**

ಐಎಮ್‌ವಿ ವರದಿಗಳ ದೃಢೀಕೃತ ಪ್ರತಿಗಳನ್ನು ಒಟ್ಟಾಗಿ **ನಿಪಿ 9** ಎಂದು, ನಕ್ಷೆಯ ಧೃಡಿಕೃತ ಪ್ರತಿಯನ್ನು **ನಿಪಿ 10** ಎಂದು, ನಿಪಿ 10ರ ತರ್ಜುಮೆ ಪ್ರತಿಯನ್ನು **ನಿಪಿ 10(ಎ)** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ 2ನೇ ಎದುದಾರರ ಪರ ಮಾನ್ಯ ವಕೀಲರಿಂದ.</u>**

ಅಪಘಾತದಲ್ಲಿ ಮೃತಪಟ್ಟ ಲಕ್ಷ್ಮೀ ಕಾಂತ ನನ್ನ ಮಗ. ನನಗೆ ಒಬ್ಬನೇ ಮಗ. ಆ ದಿನ ನನ್ನ ಮಗ ನಮ್ಮ ಮನೆಯಿಂದ ಹೊಲಕ್ಕೆ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಅಪಘಾತವಾಗಿರುತ್ತದೆ. ನನ್ನ ಮಗ ಆತನ ಚಿಕ್ಕಮ್ಮನೊಂದಿಗೆ ದ್ವಿಚಕ್ರ ವಾನದಲ್ಲಿ ಹೋಗುತ್ತಿದ್ದರು. ವಾಹನವನ್ನು ನನ್ನ ಮಗ ಚಾಲನೆ ಮಾಡುತ್ತಿದ್ದನು. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಅಪಘಾತದ ಬಗ್ಗೆ ದೂರನ್ನು ಅದೇ ದಿನಾಂಕದಂದು ಸಂಜೆ 7 ಗಂಟೆಯ ಸಮಯದಲ್ಲಿ ನಾನೇ ನೀಡಿರುತ್ತೇನೆ. ಅಪಘಾತವಾದಾಗ ಸುಮಾರು 10 ಜನ ಸೇರಿದ್ದರು. ನನ್ನ ಮಗ ತಿರುವಿನಲ್ಲಿ ಹೋಗುತ್ತಿದ್ದಾಗ ಮತ್ತೊಂದು ದ್ವಿಚಕ್ರ ವಾಹನ ಡಿಕ್ಕಿಪಡಿಸಿದ ಕಾರಣ ಅಪಘಾತವಾಗಿರುತ್ತದೆ. ಆಪಾದಿತ ವಾಹನ ಬಾಲದಿಮ್ಮನ ಹಳ್ಳಿಯ ವ್ಯಕ್ತಿಗೆ ಸೇರಿರುತ್ತದೆ. ಆಪಾದಿತ ವಾಹನದ ಚಾಲಕನನ್ನು ನಾನು ನೋಡಿರುವುದಿಲ್ಲ. ಸ್ಥಳದಲ್ಲಿದ್ದವರು ಯಾರೂ ದೂರನ್ನು ನೀಡಿರುವುದಿಲ್ಲ. ಅಪಘಾತ ಸುಮಾರು 10.30-11 ಗಂಟೆಯ ಸಮಯದಲ್ಲಿ ಸಂಭವಿಸಿರುತ್ತದೆ. ಆಪಾದಿತ ವಾಹನ ಮಾಲೀಕರು ನನ್ನ ಸಂಬಂಧಿಕರಾದ ಕಾರಣ, ನಾನು ಅಪಘಾತವನ್ನು ನೋಡದೇ ಇದ್ದರೂ ಸಹ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಸದರಿ ವಾಹನದ ಚಾಲಕನ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ

ಸರಿಯಲ್ಲ. ಆಪಾದಿತ ವಾಹನದ ಮಾಲೀಕರು, ಪೊಲೀಸರೊಂದಿಗೆ ಶಾಮೀಲಾಗಿ ಸುಳ್ಳು ದೂರನ್ನು ದಾಖಲಿಸುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮಗನಿಗೆ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಸರಿ. ಆ ದಿನ ನನ್ನ ಮಗ ಮತ್ತು ಅವರ ಚಿಕ್ಕಮ್ಮ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿ. ನನ್ನ ಮಗನ ತಪ್ಪಿ ನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ನಾವು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. 3ನೇ ಎದುರುದಾರರು ನನ್ನ ಸೊಸೆ. ನನ್ನ ಮಗನಿಗೆ ಸುಮಾರು 20 ವರ್ಷಗಳ ಹಿಂದೆ ವಿವಾಹ ಆಗಿರುತ್ತದೆ. 4 ರಿಂದ 6ನೇ ಎದುರುದಾರರು ನನ್ನ ಮೊಮ್ಮಕ್ಕಳು. ಅಪಘಾತವಾದಾಗ 3ನೇ ಎದುರುದಾರರು ತನ್ನ ತವರು ಮನೆಯಲ್ಲಿ ಇದ್ದು, ಎಲ್ಲರೂ ಒಟ್ಟಾಗಿ ವಾಸವಾಗಿದ್ದೇವೆ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 4ನೇ ಎದುರುದಾರರು ವಿವಾಹವಾಗಿ ತನ್ನ ಗಂಡನ ಮನೆಯಲ್ಲಿ ವಾಸವಾಗಿದ್ದಾರೆ. 5ನೇ ಎದುರುದಾರರು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. 6ನೇ ಎದುರುದಾರರು ವಿದ್ಯಭ್ಯಾ ಸ ಮಾಡುತ್ತಿದ್ದಾರೆ. ಅಪಘಾತವಾದಾಗ ನನ್ನ ಮಗ ನನ್ನೊ ಂದಿಗೆ ವಾಸವಾಗಿದ್ದನು. 3ನೇ ಎದುರುದಾರರು 4 ಮತ್ತು 5ನೇ ಎದುರುದಾರರ ಜನನವಾದ ನಂತರ ಸುಮಾರು 12 ವರ್ಷಗಳ ಕಾಲ ತನ್ನ ತವರು ಮನೆಯಲ್ಲಿ ವಾಸವಾಗಿದ್ದು, ನಂತರ ಆಕೆಯನ್ನು ನಮ್ಮ ಮನೆಗೆ ಕರೆತಂದಿರುತ್ತೇವೆ.

ನನ್ನ ಮಗ ವ್ಯವಸಾಯ ಮತ್ತು ಕೂಲಿ ಕೆಲಸ ಮಾಡುತ್ತಿದ್ದನು. ವ್ಯವಸಾಯದ ಜಮೀನು ಇರುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ನಮಗೆ ಯಾವುದೇ ಜಮೀನು ಇಲ್ಲ ಮತ್ತು ನನ್ನ ಮಗ ವ್ಯವಸಾಯ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 7 ರ ಪ್ರಕಾರ ನಮಗೆ ಯಾವುದೇ ವರಮಾನ ಇಲ್ಲ ಎಂದರೆ ಸರಿಯಲ್ಲ. ಸದರಿ ದಾಖಲಾತಿಯ ಪ್ರಕಾರ ಕೇವಲ ಪಡಿತರ ಬಳಕೆ ವಸ್ತುಗಳನ್ನು ನೀಡುತ್ತಿದ್ದು, ಪಿಂಚಣಿ ನೀಡುತ್ತಿರಲಿಲ್ಲ. ನಿಪಿ 7 ರ ಪ್ರಕಾರ 5ನೇ

ಎದುರುದಾರರು ಮತ್ತು ನಾನು ಮಾತ್ರ ಒಟ್ಟಾಗಿ ವಾಸವಾಗಿದ್ದೆವು ಎಂದರೆ ಸರಿ. ನನ್ನ ಮಗನ ವರಮಾನದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ಅಂತ್ಯಸಂಸ್ಕಾರ ಮತ್ತು ಇತರೆ ಖರ್ಚುಗಳಿಗೆ ನಾನು ಹೇಳಿರುವಷ್ಟು ಹಣವನ್ನು ವ್ಯಯಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಮೃತಪಡುವ ಕಾಲಕ್ಕೆ 48 ವರ್ಷ ವಯಸ್ಸು ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ಸುಮಾರು 65 ವರ್ಷಕ್ಕೂ ಮೇಲ್ಪಟ್ಟ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ಓದಲು ಬರುವುದಿಲ್ಲ, ನನ್ನ ಮಗನಿಗೆ ಅಷ್ಟು ವಯಸ್ಸು ಆಗಿರಬಹುದು ಎಂದು ನುಡಿಯುತ್ತಾರೆ. ನನ್ನ ಮಗನ ವಯಸ್ಸನ್ನು ದಾಖಲಾತಿಗಳನ್ನು ಸುಳ್ಳು ನಮೂದು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಆಪಾದಿತ ವಾಹನದ ತಪ್ಪಿ ನಿಂದ ಅಪಘಾತವಾಗದೇ ಇರುವ ಕಾರಣ ನಾವು ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

1, 3 ರಿಂದ 6 ನೇ ಎದುರುದಾರರ ಪರ ಮಾನ್ಯ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು .

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**